**ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:18.09.2019 ರಂದು ಅಪರಾಹ್ನ 3:00 ಗಂಟೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಭಾ ಕೊಠಡಿಯಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಬಗ್ಗೆ ಜರುಗಿದ ಸಭೆಯ ನಡವಳಿಗಳು.**

ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು(ಶ್ರೀ/ಶ್ರೀಮತಿ):

1. ಉಮಾ ಮಹದೇವನ್, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
3. ಜಯಚಂದ್ರಮಣಿ, ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ(KSRSAC), ಬೆಂಗಳೂರು.
4. ಶಿವರಾಮೇಗೌಡ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
5. ಡಾ|| ಸಿದ್ಧರಾಮಯ್ಯ, ಉಪಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
6. ಟಿ.ಕೆ. ರಮೇಶ್, ಉಪ ಕಾರ್ಯದರ್ಶಿ, ತುಮಕೂರು ಜಿಲ್ಲಾ ಪಂಚಾಯತ್.
7. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು (ಇ-ಸ್ವತ್ತು ತಂತ್ರಾಂಶ), ಎನ್.ಐ.ಸಿ, ಬೆಂಗಳೂರು.
8. ಶಾಂತಲಾ ಕೆ., ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಡಗೂರು ಗ್ರಾ. ಪಂ., ಗುಬ್ಬಿ ತಾ.ಪಂ, ತುಮಕೂರು ಜಿ.ಪಂ.
9. ಗಂಗಾರಾಮ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ದೊಡ್ಡಜಾಲ ಗ್ರಾ.ಪಂ, ಬೆಂಗಳೂರು ಉತ್ತರ ತಾ.ಪಂ.
10. ಮಹೇಶ್, GIS Expert, KSRSAC, ಬೆಂಗಳೂರು.
11. ರೂಪ ಬಿ. Team Lead, KSRSAC, ಬೆಂಗಳೂರು.
12. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
13. ಅಮೃತವರ್ಷಿಣಿ, ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ನಿರ್ದೇಶಕರು(ಇ-ಆಡಳಿತ) ರವರು ಸ್ವಾಗತಿಸಿದರು.

1. ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿನ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಮೂಲಕ ಆಸ್ತಿಯ ಮಾಹಿತಿಯನ್ನು ಕರಾರುವಕ್ಕಾಗಿಸಲು ನ್ನುಆಮತ್ತು ತೆರಿಗೆ ವ್ಯಾಪ್ತಿಯನ್ನು ವಿಸ್ತಿರಿಸುವ ವಿಧಾನವನ್ನು ಮತ್ತು ಪಂಚತಂತ್ರ ತಂತ್ರಾಂಶದ ಎಲ್ಲಾ ಆಸ್ತಿಗಳನ್ನು ಇ-ಸ್ವತ್ತು ತಂತ್ರಾಂಶದಲ್ಲಿ ಇಂಧೀಕರಿಸುವ ಪ್ರಕ್ರಿಯೆಯನ್ನು ಶ್ರೀ ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ ಇವರು ಸಭೆಗೆ ವಿವರಿಸಿದರು.
2. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ, ಆಸ್ತಿಗಳ ಡಿಜಿಟಲೀಕರಣಕ್ಕಾಗಿ 2019ನೇ ಸಾಲಿನಲ್ಲಿ ನಕ್ಷೆಯನ್ನು ಪಡೆಯುವುದು. ಈಗಾಗಲೇ KSRSAC ರವರಿಗೆ ₹ 1.38 ಕೋಟಿ ಬಿಡುಗಡೆ ಮಾಡಲು KTPP ಅಧಿನಿಯಮದ 4G Exemption ಅನ್ನು ಆರ್ಥಿಕ ಇಲಾಖೆಯು ನೀಡಿರುವುದರಿಂದ, ಕೂಡಲೇ ಅನುದಾನವನ್ನು KSRSAC ರವರಿಗೆ ಬಿಡುಗಡೆ ಮಾಡಲು ನಿರ್ದೇಶಕರು (ಇ-ಆಡಳಿತ) ರವರಿಗೆ ಸೂಚಿಸಲಾಯಿತು.

**ಕ್ರಮ: ನಿರ್ದೇಶಕರು(ಇ-ಆಡಳಿತ)**

3. ದಿನಾಂಕ:23.08.2019 ರಂದು ಜರುಗಿದ ಸಭೆಯಲ್ಲಿ ನಿರ್ಧರಿಸಿದಂತೆ, ದೊಡ್ಡಜಾಲ ಗ್ರಾಮ ಪಂಚಾಯತಿಯ ಚಿಕ್ಕನಹಳ್ಳಿ ಗ್ರಾಮದಲ್ಲಿ ಆಸ್ತಿಗಳ ಡಿಜಿಟಲೀಕರಣದ ಪ್ರಕ್ರಿಯೆ ಶುರು ಮಾಡಿರುವ ಬಗ್ಗೆ ಉಪ ಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ರವರಿಗೆ ತಿಳಿಸಿದರು.

ಸಂ:ಗ್ರಾಅಪ/48/ಗ.ಕೋಶ/2019 ದಿನಾಂಕ:25.09.2019

4. KSRSAC ನಕ್ಷೆಯೊಂದಿಗೆ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ(BMRDA) ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ (DTCP) ರವರ ನಕ್ಷೆಗಳನ್ನು ಸಂಯೋಜಿಸಿದ್ದಲ್ಲಿ(Integrate) ಅಕ್ರಮವಾಗಿ ಭೂಸ್ವಾಧೀನವಾದ ವಿವರಗಳನ್ನು ನಕ್ಷೆ ಮೂಲಕವೇ ಕಂಡುಹಿಡಿಯಬಹುದಾಗಿದೆ ಮತ್ತು BMRDA ಮತ್ತು DTCP ನಕ್ಷೆಗಳನ್ನು ಸದರಿ ಇಲಾಖೆಯಿಂದ ಪಡೆಯಬಹುದಾಗಿದೆ ಎಂದು ನಿರ್ದೇಶಕರು, KSRSAC ರವರಿಗೆ ತಿಳಿಸಿದರು.

5. ಅದರಂತೆ, ಕೂಡಲೇ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (BMRDA) ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ (DTCP) ರವರಿಗೆ ಸಭೆಯನ್ನು ಏರ್ಪಡಿಸಲು ನಿರ್ದೇಶಕರು (ಇ-ಆಡಳಿತ) ರವರಿಗೆ ತಿಳಿಸಿದರು.

**ಕ್ರಮ:ನಿರ್ದೇಶಕರು(ಇ-ಆಡಳಿತ)**

6. ಪ್ರಾಯೋಗಿಕವಾಗಿ ಆಸ್ತಿಗಳ ಡಿಜಿಟಲೀಕರಣ ಮಾಡುವ ಸಂದರ್ಭದಲ್ಲಿ ಎದುರಾಗುವ ಕಾರ್ಯಾಚರಣೆ ಸಮಸ್ಯೆಗಳನ್ನು ವರದಿಯೊಂದಿಗೆ ಸರ್ಕಾರದ ಗಮನಕ್ಕೆ ತರುವುದು. ತದನಂತರ ಸದರಿ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗುವುದು ಎಂದು ಮಾನ್ಯ ಪ್ರಧಾನ ಕಾರ್ಯದರ್ಶಿ ರವರು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಉಪ ಕಾರ್ಯದರ್ಶಿ, ಬೆಂಗಳೂರು ನಗರ ರವರಿಗೆ ನಿರ್ದೇಶಿಸಿದರು.

**ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಉಪ ಕಾರ್ಯದರ್ಶಿ, ಬೆಂಗಳೂರು ನಗರ.**

7. ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ, ಕಳೆದ ಸಭೆಯಲ್ಲಿ ನಿರ್ಧರಿಸಿದಂತೆ ಗ್ರಾಮ ಪಂಚಾಯತಿಗಳ ಬದಲಿಗೆ ಒಂದೇ ಗ್ರಾಮ ಪಂಚಾಯತಿಯಲ್ಲಿ KSRSAC ರವರ 2017ನೇ ಸಾಲಿನ ನಕ್ಷೆಗಳನ್ನು ಉಪಯೋಗಿಸಿಕೊಂಡು ಆಸ್ತಿಗಳ ಡಿಜಿಟಲೀಕರಣವನ್ನು ಮ್ಯಾನ್ಯುಯಲ್ ಸಮೀಕ್ಷೆ ಮಾಡಲು ಸೂಚಿಸಲಾಯಿತು.

**ಕ್ರಮ: ಉಪ ಕಾರ್ಯದರ್ಶಿ, ತುಮಕೂರು ಜಿ.ಪಂ.**

8. ಈಗಾಗಲೇ ಅಡಗೂರು ಗ್ರಾಮ ಪಂಚಾಯತ್ ನಲ್ಲಿ ಆಸ್ತಿಗಳ ಡಿಜಿಟಲೀಕರಣಕ್ಕಾಗಿ ಮ್ಯಾನ್ಯುಯಲ್ ಸಮೀಕ್ಷೆಯನ್ನು ಪ್ರಾರಂಭ ಮಾಡಲಾಗಿತ್ತು. KSRSAC ನಕ್ಷೆಯನ್ನು ಪಡೆದು ಆಸ್ತಿಗಳ polygon ಅನ್ನುರಚಿಸಿ, ನಕ್ಷೆಗಳನ್ನು KSRSAC ರವರಿಗೆ ಹಿಂದಿರುಗಿಸಲಾಗಿದೆ ಎಂದು ಉಪ ಕಾರ್ಯದರ್ಶಿ, ತುಮಕೂರು ಜಿ.ಪಂ. ರವರು ಸಭೆಗೆ ತಿಳಿಸಿದರು.

9. ಮಾನ್ಯ ಪ್ರಧಾನ ಕಾರ್ಯದರ್ಶಿ ರವರು ದಿನಾಂಕ:20.10.2019ರೊಳಗೆ ಬೆಂಗಳೂರು ನಗರ ಮತ್ತು ತುಮಕೂರು ಜಿಲ್ಲೆಯಲ್ಲಿ ಒಂದು ಗ್ರಾಮ ಪಂಚಾಯತ್ ನಲ್ಲಿ ಆಸ್ತಿಗಳ ಡಿಜಿಟಲೀಕರಣದ ಎಲ್ಲಾ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಿ ಸರ್ಕಾರಕ್ಕೆ ವರದಿ ಮಾಡಲು ಸೂಚಿಸಿದರು.

**ಕ್ರಮ:ಉಪ ಕಾರ್ಯದರ್ಶಿ, ಬೆಂಗಳೂರು ನಗರ ಮತ್ತು ತುಮಕೂರು ಜಿ.ಪಂ.**

10. ಯೋಜನೆಯ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಹಾಗೂ ಆಸ್ತಿಗಳ ಡಿಜಿಟಲೀಕರಣದ ಸಮಯದಲ್ಲಿ ಆಸ್ತಿ ಮಾಲೀಕರು ಸಂಬಂಧಪಟ್ಟ ದಾಖಲೆಯೊಂದಿಗೆ ಸಿದ್ಧವಾಗಿರಲು, ಕರಪತ್ರ (pamphlets) ಗಳನ್ನು ತಯಾರಿಸುವಂತೆ ಉಪ ಕಾರ್ಯದರ್ಶಿ, ಬೆಂಗಳೂರು ನಗರ ಮತ್ತು ಉಪ ಕಾರ್ಯದರ್ಶಿ, ತುಮಕೂರು ಜಿ.ಪಂ. ರವರಿಗೆ ಸೂಚಿಸಿದರು.

**ಕ್ರಮ: ಉಪ ಕಾರ್ಯದರ್ಶಿ, ಬೆಂಗಳೂರು ನಗರ ಮತ್ತು ತುಮಕೂರು ಜಿ.ಪಂ.**

**ಸಂ:ಗ್ರಾಅಪ/48/ಗ.ಕೋಶ/2019** **ದಿನಾಂಕ:25.09.2019**

11. ಪ್ರಾಯೋಗಿಕವಾಗಿ ಮಾಡಲಾಗುತ್ತಿರುವ ಆಸ್ತಿಗಳ ಡಿಜಿಟಲೀಕರಣದ ದಿನವಾರು ಪ್ರಗತಿಯನ್ನು ಪರಿಶೀಲಿಸುವಂತೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ನಗರ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ತುಮಕೂರು ರವರಿಗೆ ತಿಳಿಸಲಾಯಿತು.

**ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ನಗರ ಮತ್ತು ತುಮಕೂರು ಜಿ.ಪಂ.**

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/48/ಗ.ಕೋಶ/2019
ದಿನಾಂಕ:25.09.2019

(ಉಮಾ ಮಹದೇವನ್, ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(;ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

27/9/19

ಇವರಿಗೆ:

1. ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
2. ನಿರ್ದೇಶಕರು(ಪಂ.ರಾಜ್-1), ಗ್ರಾಅಪ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ(KSRSAC), ಬೆಂಗಳೂರು.
4. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ತುಮಕೂರು ಜಿಲ್ಲಾ ಪಂಚಾಯತ್.
6. ಉಪಕಾರ್ಯದರ್ಶಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್.
7. ಉಪ ಕಾರ್ಯದರ್ಶಿ, ತುಮಕೂರು ಜಿಲ್ಲಾ ಪಂಚಾಯತ್.
8. ಹಿರಿಯ ತಾಂತ್ರಿಕ ನಿರ್ದೇಶಕರು (ಇ-ಸ್ವತ್ತು ತಂತ್ರಾಂಶ), ಎನ್.ಐ.ಸಿ, ಬೆಂಗಳೂರು.
9. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಅಡಗೂರು ಗ್ರಾ. ಪಂ., ಗುಬ್ಬಿ ತಾ.ಪಂ, ತುಮಕೂರು ಜಿ.ಪಂ.
10. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ದೊಡ್ಡಜಾಲ ಗ್ರಾ.ಪಂ, ಬೆಂಗಳೂರು ಉತ್ತರ ತಾ.ಪಂ.
11. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗಂಗೋನಹಳ್ಳಿ ಗ್ರಾ.ಪಂ, ತುಮಕೂರು ತಾ.ಪಂ.
12. ಶ್ರೀ ಮಹೇಶ್, GIS Expert, KSRSAC, ಬೆಂಗಳೂರು.
13. ರೂಪ ಬಿ. Team Lead, KSRSAC, ಬೆಂಗಳೂರು.
14. ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
15. ತಾಂತ್ರಿಕ ಸಮಾಲೋಚಕರು(ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.

ಪ್ರತಿ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.